ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 11-06-1970

*ವಿಶ್ವಪತಿ ಯಾಗುವ ಸಾಮಗ್ರಿ* (विश्वपति बनने की सामग्री)

ಇಂದು ಸದ್ಗುರುವಾರವಾಗಿದೆ. ವಿಶೇಷವಾಗಿ ಏತಕ್ಕಾಗಿ ಕರೆಯಲಾಗಿದೆ? ಇಂದು ಕುಮಾರಿಯರ ಯಾವ ದಿನವಾಗಿದೆ? (ಸಮಾಪ್ತಿ ಸಮಾರಂಭ) ಸಮಾಪ್ತಿ ಸಮಾರಂಭವಲ್ಲ ಆದರೆ ಇಂದು ಸದ್ಗುರುವಾರ ವಿಶ್ವಪತಿಯಾಗುವ ಶುಭ ಅವಿನಾಶಿ ದಶೆ ಕುಳಿತುಕೊಳ್ಳುವ ದಿನವಾಗಿದೆ. ತಿಳಿಯಿತೇ? ಇಂದು ವಿಶ್ವಪತಿಯಾಗುವ ಯಾವ ಸಾಮಗ್ರಿಯನ್ನು ತಂದಿರುವರು? ಯಾವುದಾದರೂ ಸಮಾರಂಭವಾದರೆ ಅದರಲ್ಲಿ ಸಾಮಗ್ರಿಗಳಿರುತ್ತವೆ. ಇಂದು ವಿಶ್ವಪತಿ ಮಾಡುವ ಸಮಾರಂಭದಲ್ಲಿ ವಿಶೇಷ ಯಾವ ಸಾಮಗ್ರಿ ತಂದಿರುವರು? ಕಿರೀಟ, ಸಿಂಹಾಸನ ಮತ್ತು ತಿಲಕ, ಈ ಮೂರೂ ಧಾರಣೆ ಮಾಡುವ ಸಾಹಸವಿದೆಯೇ? ಕಿರೀಟವನ್ನು ಧಾರಣೆ ಮಾಡಲು, ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಮತ್ತು ತಿಲಕವನ್ನು ಧರಿಸಲು ಏನು ಮಾಡಬೇಕು? ಒಂದು ವೇಳೆ ಇದನ್ನು ಧಾರಣೆ ಮಾಡುವ ಸಾಹಸವಿದ್ದರೆ ಅದಕ್ಕಾಗಿ ಏನು ಮಾಡಬೇಕು? ಒಂದು ತ್ಯಾಗ ಇನ್ನೊಂದು ತಪಸ್ಸು ಮತ್ತು ಸೇವೆ. **ತಿಲಕವನ್ನು ಧರಿಸಲು ತಪಸ್ಸು, ಕಿರೀಟವನ್ನು ಧಾರಣೆ ಮಾಡಲು ತ್ಯಾಗ, ಮತ್ತು ಸಿಂಹಾಸನದ ಮೇಲೆ ವಿರಾಜಮಾನರಾಗಲು ಎಷ್ಟು ಸೇವೆಯನ್ನು ಮಾಡುವಿರೋ ಅಷ್ಟು ಈಗಲೂ ಆಸನ ಮತ್ತು ಭವಿಷ್ಯದಲ್ಲೂ ಆಸನ ಸಿಗುವುದು.** ಈ ಮೂರೂ ಮಾತುಗಳಿಂದಲೇ ಮೂರನ್ನೂ ಧಾರಣೆ ಮಾಡಬಹುದು. ಒಂದು ಧಾರಣೆ ಕಡಿಮೆಯಿದ್ದರೂ ವಿಶ್ವಪತಿಯಾಗುವುದಿಲ್ಲ. ತಿಳಿಯಿತೇ? ಹಾಗಾದರೆ ಈ ಮೂರೂ ಗುಣಗಳನ್ನು ತಮ್ಮಲ್ಲಿ ಸಂಪೂರ್ಣ ಧಾರಣೆ ಮಾಡಿಕೊಂಡಿದ್ದೀರಾ? ಮೂರರಲ್ಲಿ ಒಂದೂ ಬಿಡಬಾರದು. ಮೂರರ ಪ್ರತಿಜ್ಞೆಯನ್ನು ಮಾಡಿರುವಿರಾ? ಯಾವುದರ ತ್ಯಾಗವನ್ನು ಮಾಡುವಿರಿ? ಎಲ್ಲಕ್ಕಿಂತ ದೊಡ್ಡ ತ್ಯಾಗ ಯಾವುದು? ಈಗ ಸೇವೆಗಾಗಿ ಉಪಸ್ಥಿತರಾಗಿದ್ದೀರಿ ಆದ್ದರಿಂದ ಅದಕ್ಕಾಗಿ ಮುಖ್ಯ ನನ್ನತನದ ತ್ಯಾಗದ ಧಾರಣೆಯಾಗಬೇಕು. ನಾನು ಮಾಡಿದೆ, ನಾನು ಇದನ್ನು ತಿಳಿದಿದ್ದೇನೆ, ನಾನು ಇದನ್ನು ಮಾಡಬಲ್ಲೆ, **ಈ ನನ್ನತನದ ಅಭಿಮಾನವೇನಿದೆಯೋ ಅದರ ತ್ಯಾಗವನ್ನು ಮಾಡಬೇಕು. "ನಾನು" ನ ಬದಲಾಗಿ ಬಾಪ್ ದಾದಾ ಹೇಳಿದ ಜ್ಞಾನದ ಮಾತುಗಳ ವರ್ಣನೆ ಮಾಡಿ. ನಾನು ಇದನ್ನು ತಿಳಿದಿದ್ದೇನೆ. ಎಂದಲ್ಲ. ಬಾಪ್ ದಾದಾರ ಮುಖಾಂತರ ಇದನ್ನು ತಿಳಿದಿದ್ದೇನೆ.** ಜ್ಞಾನದಲ್ಲಿ ಬಂದ ಮೇಲೆ ಅಭಿಮಾನ ಬರುತ್ತದೆ, ಅದರದೂ ತ್ಯಾಗ ಮಾಡಬೇಕು. ಯಾವಾಗ ಇಷ್ಟು ತ್ಯಾಗದ ವೃತ್ತಿ ಮತ್ತು ದೃಷ್ಟಿಯಿರುವುದೋ ಆಗ ಸದಾ ಸ್ಮೃತಿಯಲ್ಲಿ ತಂದೆ ಮತ್ತು ದಾದಾ ಇರುವರು ಮತ್ತು ಮುಖದಲ್ಲಿಯೂ ಇದೇ ಶಬ್ದಗಳಿರುವವು. ಆಗ ವಿಶ್ವಪತಿಯಾಗಬಲ್ಲಿರಿ. ವಿಶ್ವದ ಸೇವೆ ಮಾಡಬಲ್ಲಿರಿ. ತಿಳಿಯಿತೇ?

ವಿಶೇಷ ಕನ್ಯೆಯರಿಗೆ ತಮ್ಮ ಧಾರಣೆಯನ್ನು ಅವಿನಾಶಿ ಮಾಡಿಕೊಳ್ಳಲು ಅಥವಾ ಸದಾ ಕಾಯಂ ಇಟ್ಟುಕೊಳ್ಳಲು ಯಾವ ಎರಡು ಮಾತುಗಳನ್ನು ನೆನಪಿಟ್ಟುಕೊಳ್ಳಬೇಕು? ಒಂದು ಎಲ್ಲಾ ಮಾತುಗಳಲ್ಲಿ ಸರಳವಾಗಿರಬೇಕು ಮತ್ತು ತಮ್ಮನ್ನು ಉದಾಹರಣೆ ( ಸಿಂಪಲ್ ಮತ್ತು ಸ್ಯಾಂಪಲ್) ಎಂದು ತಿಳಿದುಕೊಳ್ಳಬೇಕು. ತಾವು ಹೇಗೆ ಉದಾಹರಣೆಯಾಗಿ ತೋರಿಸುವಿರೋ ಹಾಗೆ ಅನೇಕ ಆತ್ಮರು ಸಹ ವ್ಯಾಪಾರ ಮಾಡಲು ಯೋಗ್ಯರಾಗುವರು. ಆದ್ದರಿಂದ ಈ ಎರಡು ಮಾತುಗಳನ್ನು ಸದಾ ನೆನಪಿಡಿ. ತಮ್ಮನ್ನು ಇಂತಹ ಶ್ರೇಷ್ಠ ಉದಾಹರಣೆಯನ್ನಾಗಿ ಮಾಡಿಕೊಂಡಿರುವಿರಾ? ಒಳ್ಳೆಯ ಉದಾಹರಣೆಗೆ ಮುದ್ರೆ ಹಾಕಲಾಗುತ್ತದೆ. ಎಂದಿಗೂ ಅಳಿಸದಂತಹ ಯಾವ ಮುದ್ರೆಯನ್ನು ತಾವು ಹಾಕಿಕೊಂಡು ಹೋಗುವಿರಿ? ಶಿವಶಕ್ತಿಯರು ಮತ್ತು ಬ್ರಹ್ಮಾಕುಮಾರಿಯರು ಎಂದು ಸಾಕಾರದಲ್ಲಿ ನಿಮಿತ್ತರಾಗಿರುವಂತಹ ಇಬ್ಬರು ದೊಡ್ಡ ಅಧಿಕಾರಿಗಳು ಮುದ್ರೆ (ಛಾಪು) ಹಾಕುತ್ತಿರುವರು. ಆದ್ದರಿಂದ "ಅಳಿಸಿಹಾಕುವೆವು ಆದರೆ ಹಿಮ್ಮೆಟ್ಟುವುದಿಲ್ಲ" ಎಂಬುದನ್ನು ನೆನಪಿಡಬೇಕು. ಸಂಸ್ಕಾರಗಳಲ್ಲಿ, ಸೇವೆಯಲ್ಲಾಗಲಿ, ಸಂಬಂಧಗಳಲ್ಲಿ, ಎಲ್ಲಾ ಮಾತುಗಳಲ್ಲಿ ತಮ್ಮನ್ನು ಅಳಿಸಿ ಹಾಕುವೆವು ಆದರೆ ಹಿಮ್ಮೆಟ್ಟುವುದಿಲ್ಲ. ಹಿಮ್ಮೆಟ್ಟುವುದು ದುರ್ಬಲತೆ. ಶಿವಶಕ್ತಿಯರು ತಮ್ಮನ್ನು ಅಂತ್ಯಗೊಳಿಸಿಕೊಳ್ಳುವರು ಆದರೆ ಹಿಮ್ಮೆಟ್ಟುವುದಿಲ್ಲ. ಆದ್ದರಿಂದ ಈ ಮಾತುಗಳನ್ನು ನೆನಪಿಟ್ಟುಕೊಳ್ಳಬೇಕು. ಈ ಗುಂಪಿಗೆ ಪ್ರ್ಯಾಕ್ಟಿಕಲ್

ಪರೀಕ್ಷೆ ಯಾವಾಗ ಇರುವುದು? ಇದು ಅಂತಿಮ ಫಲಿತಾಂಶವಲ್ಲ. ಈಗ ಪರೀಕ್ಷೆ ಕೊಡಲು ಹೋಗುತ್ತಿರುವಿರಿ. ನಂತರ ಅದರ ಫಲಿತಾಂಶವನ್ನು ನೋಡುವಿರಿ. ಈ ಗುಂಪು ಮುಂದೆ ಹೆಜ್ಜೆ ಇಡಬಹುದು. ಹೀಗೆ ಬಾಪ್ ದಾದಾ ಭರವಸೆಯನ್ನು ಇಟ್ಟುಕೊಳ್ಳುತ್ತಾರೆ. ಆದ್ದರಿಂದ ಏನೆಲ್ಲಾ ಕರ್ಮಬಂಧನಗಳಿವೆಯೋ ಅವುಗಳನ್ನು ಬಹಳ ಬೇಗನೆ ಕತ್ತರಿಸಿ ಮಧುಬನದಲ್ಲಿ ಸಂಪೂರ್ಣ ಸಮರ್ಪಣೆಯ ಸಮಾರಂಭವನ್ನು ಆಚರಿಸುವುದು ಎಂದು ತಿಳಿದುಕೊಳ್ಳಿ. ಈ ಉದ್ದೇಶದಿಂದ ಹೋಗಿ. ಆಗ ಈ ಗುಂಪಿನಿಂದ ಅನೇಕ ಜನರ ಸಂಪೂರ್ಣ ಸಮರ್ಪಣೆಯ ಸಮಾರಂಭವಾಗುವುದು. ಮಹಾಬಲಿಯಾಗುವ ಮಾತುಗಳನ್ನು ಹೇಳಿದೆವು. ನಂತರ ಮಹಾಬಲಿಯಾಗಲು ಬಂದಾಗ ಬಾಪ್ ದಾದಾ ಬಹಳ ಶೃಂಗಾರ ಮಾಡುವರು. ಶೃಂಗಾರ ಮಾಡಿ ಸ್ವಾಹಾ ಮಾಡಿಸಬೇಕು. ಎಷ್ಟು ಬಾಪ್ ದಾದಾ ಸ್ನೇಹಿಯೋ ಅಷ್ಟು ಸಹಯೋಗಿಯಾಗಬೇಕು. ತಮ್ಮಲ್ಲಿ ಸರ್ವಶಕ್ತಿಗಳನ್ನು ಧಾರಣೆ ಮಾಡಿಕೊಂಡಾಗ ಸಹಯೋಗಿಯಾಗುವಿರಿ ನಂತರ ಸ್ವಾಹಾ ಆಗುವುದು ಸಹಜವಾಗುವುದು. ಇಂದಿನ ದಿನವೇ ಯಾವುದೇ ಶಕ್ತಿಯ ಕೊರತೆಯಿದ್ದರೆ ಅದನ್ನು ತಮ್ಮಲ್ಲಿ ತುಂಬಿಕೊಂಡು ಹೋಗಿ. ಕೊರತೆಯನ್ನು ಜೊತೆಗೆ ತೆಗೆದುಕೊಂಡು ಹೋಗಬೇಡಿ. ಈಗ ಕೇವಲ ಲೆಕ್ಕಾಚಾರವನ್ನು ಚುಕ್ತಾ ಮಾಡಲು ಹೋಗುತ್ತೀರಿ. ಸರ್ವಶಕ್ತಿಗಳನ್ನು ತಮ್ಮಲ್ಲಿ ತುಂಬಿಕೊಂಡು ಹೋದರೆ ಆಗ ಚುಕ್ತಾ ಮಾಡಬಲ್ಲಿರಿ. ಆದ್ದರಿಂದ ಪ್ರಾಕ್ಟಿಕಲ್ ಮಾಡಿ ತೋರಿಸಿದಾಗ ಅಂತಿಮ ಪರೀಕ್ಷೆಯ ಅಂಕಗಳು ಬರುವವು.

ಅವ್ಯಕ್ತ ಮುರಳಿ 11-06-1970.

***ವಿಶ್ವ ಪತಿಯಾಗುವ ಸಾಮಗ್ರಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಪಸ್ಸಿನಿಂದ ತಿಲಕವನ್ನು, ತ್ಯಾಗದಿಂದ ಕಿರೀಟವನ್ನು, ಸೇವೆಯಿಂದ ಸಿಂಹಾಸನವನ್ನು ಪಡೆದಿರುವ ವಿಶ್ವಪತಿ.

2. "ನಾನು" ಎಂಬುದಕ್ಕೆ ಬದಲಾಗಿ ಬಾಪ್ ದಾದಾರವರ ಜ್ಞಾನವನ್ನು ವರ್ಣನೆ ಮಾಡುವುದು, "ನನಗೆ ಇದು ತಿಳಿದಿದೆ" ಎಂಬುದಕ್ಕೆ ಬದಲಾಗಿ 'ಬಾಪ್ ದಾದಾರವರಿಂದ ತಿಳಿದುಕೊಂಡಿದ್ದೇನೆ' ಎಂದು ಹೇಳುವುದರಿಂದ ಅಭಿಮಾನವನ್ನು ತ್ಯಾಗ ಮಾಡಿದ್ದೇನೆ.

3. ನಾನು ಸ್ವಯಂ ಅನ್ನು ಎಲ್ಲಾ ವಿಷಯಗಳಲ್ಲಿ ಸಾಧಾರಣವಾಗಿ ಮತ್ತು ಉದಾಹರಣೆಯಾಗಿ ಭಾವಿಸಿ ನನ್ನ ಧಾರಣೆಯನ್ನು ಅವಿನಾಶಿಯಾಗಿ ಮಾಡಿಕೊಂಡಿದ್ದೇನೆ.

4. ನಾನು ಸಂಸ್ಕಾರಗಳಲ್ಲಿ, ಸೇವೆಯಲ್ಲಿ, ಸಂಬಂಧದಲ್ಲಿ, ಎಲ್ಲಾ ವಿಷಯಗಳಲ್ಲಿ ಸ್ವಯಂ ಅನ್ನು "ಅಳಿಸಿ ಹಾಕುತ್ತೇನೆ ಆದರೆ ಹಿಮ್ಮೆಟ್ಟುವುದಿಲ್ಲ".

5. ನಾನು ಕರ್ಮ ಬಂಧನಗಳನ್ನು ಕತ್ತರಿಸಿ ಸಂಪೂರ್ಣ ಸಮರ್ಪಣಾ ಸಮಾರಂಭವನ್ನು ಆಚರಿಸಿಕೊಂಡಿದ್ದೇನೆ.

6. ನಾನು ಎಷ್ಟು ಸ್ನೇಹಿಯೋ ಅಷ್ಟು ಸರ್ವ ಶಕ್ತಿಗಳನ್ನು ಧಾರಣೆ ಮಾಡಿರುವ ಸಹಯೋಗಿ.

7. ನಾನು ಸರ್ವಶಕ್ತಿಗಳನ್ನು ನನ್ನಲ್ಲಿ ತುಂಬಿಕೊಂಡು ಪ್ರತ್ಯಕ್ಷವಾಗಿ ಕರ್ಮಗಳ ಖಾತೆಯನ್ನು ಪೂರ್ತಿ ಮಾಡಿಕೊಂಡು, ಅಂತಿಮ ಪರೀಕ್ಷೆಯಲ್ಲಿ ಮೊದಲ ನಂಬರನ್ನು ತೆಗೆದುಕೊಂಡಿದ್ದೇನೆ.